SC 5/2023
PW5

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.5**
**ಚಾಸಾ.10**

| | | |
|---|---|---|
| ಸಾಕ್ಷಿದಾರರ ಹೆಸರು | - | ಮೀನಾಕ್ಷಿ |
| ಗಂಡನ ಹೆಸರು | - | ಹೇಮಂತ ಕರ್ಕೇರಾ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಗೃಹಿಣಿ |
| ವಿಳಾಸ | - | ಮುಂಬೈ. |

ದಿನಾಂಕಃ 28-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

1. ಚಾಸಾ1 ಮತ್ತು 2 ನನ್ನ ಚಿಕ್ಕಮ್ಮ. ಚಾಸಾ3 ನನ್ನ ತಂದೆ. ಚಾಸಾ4 ನನ್ನ ಚಿಕ್ಕಪ್ಪ. ಚಾಸಾ.9 ನನ್ನ ತಮ್ಮ. ಮೃತ ಕೃತಿಕ್ ಈತನ ಪರಿಚಯ ಇದೆ. ಆತ ನನ್ನ ಮಾವನ ಮಗ. ಆರೋಪಿಯ ಪರಿಚಯ ಇದೆ. ಮೃತ ಕೃತಿಕ್ ಕುಕ್ಕೆಹಳ್ಳಿಯಲ್ಲಿ ಚಾಸಾ1 ಇವರ ಜೊತೆ ವಾಸ ಮಾಡುತ್ತಿದ್ದ. ಕೃತಿಕ್ ನ ತಂದೆ ತಾಯಿ ಮೃತ ಪಟ್ಟಿರುತ್ತಾರೆ. ಅವರು ತೀರಿಹೋದ ನಂತರ ಕೃತಿಕ್ ಚಾಸಾ1 ರವರ ಜೊತೆ ವಾಸ ಮಾಡುತ್ತಿದ್ದ. ಕೃತಿಕನ ತಂದೆ ಮೃತ ಪಟ್ಟ ನಂತರ ಮುಂಬೈನಲ್ಲಿ ಅವರ ಖಾತೆಯಲ್ಲಿದ್ದ ಹಣವನ್ನು ಕೃತಿಕನ ಹಿರಿಯಡ್ಕ ಬ್ಯಾಂಕ್ ಶಾಖೆಗೆ ಜಮಾ ಮಾಡಿರುತ್ತಾರೆ. ಮೃತ ಕೃತಿಕ ಆರೋಪಿಯ ಜೊತೆಯಲ್ಲೇ ತಿರುಗಾಡುತ್ತಿದ್ದು, ಆರೋಪಿಯು ಬ್ರಹ್ಮಾವರದಲ್ಲಿ ಹೋಟೆಲ್ ನಡೆಸುತ್ತಿದ್ದು ಮಎತ ಕೃತಿಕ್ ಆರೋಪಿಗೆ ಹೋಟೆಲಿಗೆ ಮೀನು ಖರೀದಿ ಮಾಡಿ ತಂದು ಕೊಟ್ಟು ವ್ಯವಹಾರದಲ್ಲಿ ಸಹಕರಿಸುತ್ತಿದ್ದ. ಒಮ್ಮೆ ಕೃತಿಕ್ ನನ್ನ ತಂದೆಗೆ ದೂರವಾಣಿ ಕರೆ ಮಾಡಿ ಆರೋಪಿ ಮೂರು ಲಕ್ಷ ರೂಪಾಯಿ ಹಣ ಕೇಳುತ್ತಿದ್ದು ಅದಕ್ಕೆ ನನ್ನ ತಂದೆ ನೀನು ಅವನಿಗೆ ಹಣ ಕೊಡಬೇಡ ಎಂದು ತಿಳಿಸಿರುತ್ತಾರೆ. ನನ್ನ ತಂದೆ ಮೃತ ಕೃತಿಕ್ ಹಾಗೂ ನನ್ನ ಚಿಕ್ಕಮ್ಮನವರಿಗೆ ಬ್ಯಾಂಕಿನ ದಾಖಲೆ ಪುಸ್ತಕಗಳನ್ನು ತೆಗೆದುಕೊಂಡು ಮುಂಬೈಗೆ ಬರಲು ತಿಳಿಸಿರುತ್ತಾರೆ.

2. ಎರಡು ವರ್ಷದ ಹಿಂದೆ ನಾನು ಬೆಳಿಗ್ಗೆ ಮುಂಬೈನಲ್ಲಿದ್ದಾಗ ಕೃತಿಕ್ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ಆರೋಪಿ ನನಗೆ ಕರೆ ಮಾಡಿ ಕೃತಿಕ್ ಆತ್ಮಹತ್ಯೆ ಮಾಡಿಕೊಂಡಿದ್ದು ನೀವು ಬರುತ್ತೀರಾ ಎಂದು ಕೇಳಿರುತ್ತಾನೆ. ನಾನು ಆರೋಪಿಯ ಬಳಿ ಕೃತಿಕ್ ಏಕೆ ಆತ್ಮಹತ್ಯೆ ಮಾಡಿಕೊಂಡ ಎಂದು ವಿಚಾರಿಸಿದಾಗ ಆತನ ಮೃತ ದೇಹದಲ್ಲಿ ಒಂದು ಪತ್ರ ದೊರಕಿದ್ದು, ಅದರಲ್ಲಿ ಶಾರದಾಳ ಹೆಸರಿನಲ್ಲಿ ಬರೆದಿತ್ತು. ಮೃತ ಕೃತಿಕ್ ಮತ್ತು ಶಾರದಾಳ ನಡುವೆ ಅನೈತಿಕ ಸಂಬಂಧ ಇತ್ತು. ನಾವು ನಂತರ ಊರಿಗೆ ಬಂದಿದ್ದು ಮಣಿಪಾಲದ ಆಸ್ಪತ್ರೆಯ ಶವಾಗಾರದಲ್ಲಿ ಕೃತಿಕನ ಮೃತದೇಹ ನೋಡಿದ್ದು ಕುತ್ತಿಗೆಯ ಬಳಿ ಗಾಯದ ಗುರುತು ಇತ್ತು. ನಾನು ಚಿಕ್ಕಮ್ಮನ ಬಳಿ ಘಟನೆ ಬಗ್ಗೆ ವಿಚಾರಿಸಿದಾಗ ಮೃತ ಕೃತಿಕ್ ರಾತ್ರಿ ಮಲಗಿದ್ದವ ಬೆಳಿಗ್ಗೆ 4-30 ಗಂಟೆಗೆ ಎದ್ದು ಮೂತ್ರ ಮಾಡಿ ಬರುವುದಾಗಿ ಹೇಳಿ ಹೋದವ ಮತ್ತೆ ವಾಪಾಸು ಬಂದಿರುವುದಿಲ್ಲ ಮತ್ತು ಆತನಿಗೆ ಪೋನ್ ಮಾಡಿದರೆ ಪೋನ್ ಕೂಡ ಸ್ವೀಕರಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಆತನನ್ನು ಅಕ್ಕಪಕ್ಕ ವಿಚಾರಿಸಿದಾಗ ಸಿಕ್ಕಿರುವುದಿಲ್ಲವೆಂದು, ನಂತರ ನೋಡಲಾಗಿ, ಆರೋಪಿಯ ಮನೆಯ ಪಂಚಾಂಗದ ಬಳಿ ಇರುವ ದೂಪದ ಮರಕ್ಕೆ ನೇಣು ಹಾಕಿಕೊಂಡಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ನಾವು ಆತನ ಅಂತ್ಯ ಸಂಸ್ಕಾರದ ನಂತರ ಮೃತನ ಮೊಬೈಲ್ ಮನೆಯಲ್ಲಿ ಸಿಗದೇ ಇದ್ದ ಕಾರಣ ಮತ್ತು ಕೃತಿಕನಿಗೆ ಸೂಸೈಡ್ ಮಾಡುವ ಮನಸ್ಥಿತಿ ಇಲ್ಲದ ಕಾರಣ ನಮಗೆ ಅನುಮಾನ ಬಂದು ಆತನ ಬ್ಯಾಂಕ್ ಖಾತೆಯನ್ನು ಹೋಗಿ ನೋಡಲಾಗಿ ಲಕ್ಷಾಂತರ ರೂಪಾಯಿ ಡ್ರಾ ಮಾಡಿರುವುದು ತಿಳಿದು ಬಂತ್ತು ಮತ್ತು ಈ ಬಗ್ಗೆ ಆರೋಪಿಯ ಮೇಲೆ ಸಂಶಯ ಬಂದು ಹಿರಿಯಡ್ಕ ಪೋಲಿಸ್ ಠಾಣೆಗೆ ಮತ್ತು ಉಡುಪಿ ಪೋಲಿಸ್ ವರಿಷ್ಟಾಧಿಕಾರಿಯವರಿಗೆ ಮಾಹಿತಿ ನೀಡಿರುತ್ತೇವೆ. ನಂತರ ಪೋಲಿಸರು ನಮ್ಮ ಸಮಕ್ಷಮದಲ್ಲಿ ಆರೋಪಿಯನ್ನು ವಿಚಾರಿಸಿದಾಗ ಆರೋಪಿ ತಾನು ಕೃತಿಕಕನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ ಮತ್ತು ಕೊಲೆಯ ವಿಚಾರವನ್ನು ವಿವರವಾಗಿ ತಿಳಿಸಿರುತ್ತಾನೆ.

3. ಮೃತ ಕೃತಿಕನ ಕುಟುಂಬಕ್ಕೆ ಸೇರಿದ ಬಂಗಾರದ ಹಾಗೂ ಬೆಳ್ಳಿಯ ಆಭರಣಗಳನ್ನು ಹಿರಿಯಡ್ಕದ ಕೆನರಾ ಬ್ಯಾಂಕಿನಲ್ಲಿ ಸೇಫ್ ಲಾಕರ್ ನಲ್ಲಿ ಇಟ್ಟಿದ್ದು ಸದ್ರಿ ಲಾಕರಿಗೆ ನನ್ನನ್ನು ನಾಮಿನಿ ಮಾಡಿರುತ್ತಾರೆ. ದಿನಾಂಕ 28-09-2022 ರಂದು ಪೋಲಿಸರು ಹಿರಿಯಡ್ಕ ಕೆನರಾ ಬ್ಯಾಂಕಿನಲ್ಲಿ ನಮ್ಮ ಸಮಕ್ಷಮದಲ್ಲಿ ಲಾಕರ್ ತೆಗೆದು ಲಾಕರಿನಲ್ಲಿ ಇಟ್ಟಿರುವಂತಹಾ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಪರಿಶೀಲಿಸಿರುತ್ತಾರೆ. ನಂತರ ಸದ್ರಿ ಆಭರಣಗಳನ್ನು ಪುನಹ ಲಾಕರ್ ನಲ್ಲಿ

ಇಟ್ಟಿರುತ್ತಾರೆ. ಈ ಬಗ್ಗೆ ಪೋಲಿಸರು ಪಂಚನಾಮೆ ಬರೆದಿದ್ದು ಸದ್ರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದ್ರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ಈಗ ನೋಡುತ್ತಿದ್ದು ನಿಪಿ-16 ಎಂದು ಗುರುತಿಸಲಾಯಿತು. ಪ್ರಕರಣದ ತನಿಖಾಧಿಕಾರಿ ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದ**

1. ಕೃತಿಕ್ ತೀರಿದ ನಂತರ ಆತನ ಸ್ಥಿರಾಸ್ತಿ ಕುಟುಂಬಕ್ಕೆ ಬಂದಿರುತ್ತದೆ, ಬಂಗಾರ ಮತ್ತು ಬೆಳ್ಳಿಗೆ ಒಡವೆಗಳಿಗೆ ನನ್ನನ್ನು ನಾಮನಿರ್ದೇಶನ ಮಾಡಿದ್ದಾರೆ. ಹಣ ಠೇವಣಿಗೆ ಯಾರನ್ನು ನಾಮಿನಿ ಮಾಡಿದ್ದಾರೆ ಗೊತ್ತಿಲ್ಲ. ಕೃತಿಕ್ ಒಮ್ಮೊಮ್ಮೆ ಮದ್ಯಪಾನ ಮಾಡುತ್ತಿದ್ದ. ಕೃತಿಕನಿಗೆ ತುಂಬಾ ಹೆಂಗಸರ ಸಹವಾಸ ಇತ್ತು ಎಂದರೆ ಸಾಕ್ಷಿ ಶಾರದಾಳ ಸಹವಾಸ ಇದ್ದ ಬಗ್ಗೆ ಮಾತ್ರ ಗೊತ್ತು ಎನ್ನುತ್ತಾರೆ. ಆತನಿಗೆ ಚಾಸಾ16 ರವರ ಜೊತೆ ಸಹವಾಸ ಇತ್ತು ಎನ್ನುವುದು ಗೊತ್ತಿಲ್ಲ. ಕೃತಿಕ್ ಹುಡುಗಿಯರಿಗೆ ಹಣ ಕೊಟ್ಟ ವಿಷಯ ನನಗೆ ಗೊತ್ತಿಲ್ಲ. ಕೃತಿಕ್ ಯಾರಿಗೆ ಹಣ ಕೊಟ್ಟರೂ ಲೆಕ್ಕಾಚಾರ ಬರೆದು ಇಡುತ್ತಿದ್ದ ಎಂದು ಗೊತ್ತಿಲ್ಲ. ಆರು ಲಕ್ಷ ಹಣ ಡೆಪಾಸಿಟ್ ಇರುವ ಬಗ್ಗೆ ಗೊತ್ತು. ಬೇರೆ ಹಣದ ಬಗ್ಗೆ ಗೊತ್ತಿಲ್ಲ. ನಾನು ವರ್ಷಕ್ಕೆ ಒಮ್ಮೆ ಮಾತ್ರ ಊರಿಗೆ ಬರುತ್ತೇನೆ. ಹಾಗೆ ಬಂದಾಗ 15-20 ದಿವಸ ಇರುತ್ತಿದ್ದೆ. ನಾನು ಆರೋಪಿ ಜೊತೆ ಒಂದು ಬಾರಿ ಪಾರ್ಸೆಲ್ ಬಗ್ಗೆ ಪೋನಿನಲ್ಲಿ ಮಾತನಾಡಿದ್ದೆ, ಸಾಕ್ಷಿ ಮುಂದುವರಿದು ಪ್ರಕರಣದ ಬಗ್ಗೆ ಆರೋಪಿ ಒಂದು ಬಾರಿ ನನಗೆ ಕರೆ ಮಾಡಿದ್ದರು ಎನ್ನುತ್ತಾರೆ. ಆರೋಪಿಯ ಫೋನ್ ನಂಬರ್ ನನ್ನ ಬಳಿ ಇತ್ತು, ಅದನ್ನು ನನಗೆ ನನ್ನ ಮಾವ ಕೊಟ್ಟಿದ್ದಾರೆ. ಕೃತಿಕ್ ಮೃತಪಟ್ಟ ದಿನ ಮಧ್ಯಾಹ್ನ 1-00 ಗಂಟೆ ಹೊತ್ತಿಗೆ ನನಗೆ ಆರೋಪಿ ಕರೆ ಮಾಡಿದ್ದರು. ನನ್ನ ಅಣ್ಣ ಕೂಡ ನನಗೆ ಕರೆ ಮಾಡಿದ್ದರು.

2. ಆರೋಪಿ ನನಗೆ ಕರೆ ಮಾಡಿದ ಬಗ್ಗೆ ನಾನು ನಮ್ಮ ಮನೆಯಲ್ಲಿ ಎಲ್ಲರಿಗೂ ತಿಳಿಸಿದ್ದೇನೆ. ಕೃತಿಕ್ ಮೃತಪಟ್ಟ ದಿನ ಮಧ್ಯಾಹ್ನ 3-30 ಗಂಟೆಗೆ ಮುಂಬೈ ಬಿಟ್ಟು ಮರುದಿನ ಊರಿಗೆ ಬಂದಿರುತ್ತೇವೆ. ಊರಿಗೆ ಬಂದು ಎಷ್ಟು ದಿನ ಇದ್ದೆ ನೆನಪಿಲ್ಲ. ಕೃತಿಕನ ಅಂತ್ಯಕ್ರಿಯೆ ಆದ ಎಷ್ಟು ದಿವಸಕ್ಕೆ ಮುಂಬೈಗೆ ವಾಪಾಸ್ಸು ಹೋಗಿದ್ದೇನೆ ಹೇಳಲು ಆಗುವುದಿಲ್ಲ. ಪುನಃ ಊರಿಗೆ ಯಾವಾಗ ಬಂದಿದ್ದೇನೆ ಎಂದು ನೆನಪಿಲ್ಲ. ನನ್ನ ಮಾವ ತೀರಿ ಹೋದ ತಿಂಗಳಲ್ಲಿ ಬಂಗಾರವನ್ನು ಬ್ಯಾಂಕಿನ

ಲಾಕರ್ ನಲ್ಲಿ ಇಡುವಾಗ ನಾನು ಕೂಡ ಹಾಜರಿದ್ದೆ. ಅಂತ್ಯ ಸಂಸ್ಕಾರ ಆದ ಎಷ್ಟು ದಿವಸದ ನಂತರ ದೂರನ್ನು ಕೊಟ್ಟಿದ್ದಾರೆ ನೆನಪಿಲ್ಲ. ಈ ಪ್ರಕರಣದಲ್ಲಿ ನಾನು ಪೋಲಿಸ್ ಠಾಣೆಗೆ ಎರಡು ಮೂರು ಬಾರಿ ಹೋಗಿರುತ್ತೇನೆ. ಆದರೆ ದಿನಾಂಕ ಹೇಳಲು ಆಗುವುದಿಲ್ಲ. ಒಂದು ಬಾರಿ ಬ್ರಹ್ಮಾವರ ಠಾಣೆಗೆ ಮತ್ತು ಒಂದು ಬಾರಿ ಹಿರಿಯಡ್ಕ ಠಾಣೆಗೆ ಹೋಗಿರುತ್ತೇನೆ. ನಾನು ಹಿರಿಯಡ್ಕ ಠಾಣೆಗೆ ಹೋದಾಗ ಆರೋಪಿ ಠಾಣೆಯಲ್ಲಿದ್ದರು. ನಾವು ಅವನ ಜೊತೆ ಮಾತನಾಡಿಲ್ಲ. ಹಿರಿಯಡ್ಕ ಠಾಣೆಗೆ ಮಧ್ಯಾಹ್ನ ಹೋಗಿ ಸಂಜೆಯವರೆಗೆ ಇದ್ದೆವು. ನಾವು ಠಾಣೆಗೆ ಹೋದಾಗ ಆರೋಪಿ ಠಾಣೆಯ ಒಳಗೆ ಇದ್ದರು. ಆತ ದೂರದಲ್ಲಿದ್ದ, ನಮಗೆ ಸರಿಯಾಗಿ ಕಾಣಿಸಿರುವುದಿಲ್ಲ. ಪೋಲಿಸರು ಆರೋಪಿಯ ಹತ್ತಿರ ಏನು ಮಾತನಾಡುತ್ತಿದ್ದರು ಗೊತ್ತಿಲ್ಲ. ಠಾಣೆಯ ಒಳಕೋಣೆಯಲ್ಲಿ ಆರೋಪಿಯನ್ನು ಪೋಲಿಸರು ವಿಚಾರಿಸುತ್ತಿದ್ದು ನಮಗೆ ಕೇಳಿಸುತ್ತಿರಲಿಲ್ಲ. ಆರೋಪಿಯ ಹತ್ತಿರ ನನ್ನನ್ನು ಕರೆದುಕೊಂಡು ಹೋಗಿ ಯಾವುದೇ ರೀತಿ ಮಾತನಾಡಿಸಿಲ್ಲ. ಕುಟುಂಬದವರೆಲ್ಲಾ ಒಟ್ಟಾಗಿ ಆರೋಪಿಯ ಮೇಲೆ ಸುಳ್ಳು ಪ್ರಕರಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಕೃತಿಕ ತನ್ನ ದುಶ್ಚಟಗಳಿಂದ ಖುದ್ದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆತ ಈ ಹಿಂದೆ ಆತ್ಯಹತ್ಯೆಗೆ ಪ್ರಯತ್ನಪಟ್ಟಿದ್ದ ಬಗ್ಗೆ ಗೊತ್ತಿಲ್ಲ. ಕೃತಿಕ ತನ್ನ ದುಶ್ಚಟಗಳಿಗಾಗಿ ದುಂದುವೆಚ್ಚ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಹಣವನ್ನೆಲ್ಲಾ ಕೃತಿಕ ತನ್ನ ಐಷಾರಾಮಿ ಜೀವನಕ್ಕೆ ಖರ್ಚು ಮಾಡಿದ್ದಾನೆ ಎನ್ನುವುದು ಗೊತ್ತಿಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ